**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

**<u>ಸಿ.ಸಿ. ನಂ.*221/2025*</u>**

*<u>ಫಿರ್ಯಾದುದಾರರುಃ</u>*   ಸರ್ಕಾರದ ಪರವಾಗಿ ಜಯಪುರ  ಪೊಲೀಸರು

**ವಿರುದ್ಧ**

| | | |
|---|---|---|
| *ಆರೋಪಿ/ತರುಃ* | ಃ | ಹರೀಶ ಡಿ. ಬಿನ್ ದುಗ್ಗಪ್ಪಗೌಡ, 50 ವರ್ಷ, ವಾಸ ಚೌಡಿಕಟ್ಟೆ, ಜಯಪುರ ಗ್ರಾಮ, ಕೊಪ್ಪ ತಾಲ್ಲೂಕು. |

***<u>ದೋಷಾರೋಪಣೆ</u>***

ಶ್ರೀಮತಿ ಎಂ.ಎನ್. ನಂದಿನಿ, ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ,03.05.2025 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಜಯಪುರ ಠಾಣಾ ಸರಹದ್ದಿನ ಚೌಡಿಕಟ್ಟೆ ಎಂಬಲ್ಲಿ ಚಾಸಾ.1 ಪ್ರಶಾಂತ್ ಡಿ. ರವರ ಅನುಭವದಲ್ಲಿರುವ ಜಯಪುರ ಗ್ರಾಮದ ಸರ್ವೆ ನಂಬರ್ 66/02 ರಲ್ಲಿ ಬರುವ ಕೃಷಿ ಜಮೀನಿಗೆ ಹೊಂದಿಕೊಂಡಿರುವ ಒತ್ತುವರಿ ಜಾಗದಲ್ಲಿ ಚಾಸಾ.1 ರವರು ಹೊಸದಾಗಿ ಮನೆ ಕಟ್ಟಲು ಜಾಗಕ್ಕೆ ಮಣ್ಣು ಹಾಕಿಸಿ ಲೇವೆಲ್ ಮಾಡಿಕೊಂಡು ಜಾಗದ ಪ್ರವೇಶ ದ್ವಾರಕ್ಕೆ ಪಿಲ್ಲರ್ ನಿಲ್ಲಿಸಿ ಗೇಟ್ ನಿರ್ಮಿಸಲು ಚಾಸಾ.2 ಅಣ್ಣು ಅಲಿಯಾಸ್ ಮಂಜುನಾಥ ರವರಿಗೆ ಕಂಟ್ರಾಕ್ಟ್ ಕೊಟ್ಟಿದ್ದು, ಅದರಂತೆ ಚಾಸಾ2 ರವರು ಚಾಸಾ.3 ಮತ್ತು ಚಾಸಾ.4 ರವರನ್ನು ಕರೆದುಕೊಂಡು ಹೋಗಿ ಎಲ್ಲರೂ ಸ್ಥಳದಲ್ಲಿ ಪಿಲ್ಲರ್ ಗೆ ಕಬ್ಬಿಣದ ರಾಡ್ ಕಟ್ಟುವ ಕೆಲಸ ಮಾಡುತ್ತಿರುವಾಗ ಆರೋಪಿಯಾದ ನೀವು ಏಕಾಏಕಿ ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಕೆಲಸ ಮಾಡುವ ಸ್ಥಳದಲ್ಲಿದ್ದ ಚಾಸಾ.1 ರವರಿಗೆ ಇಲ್ಲಿ ಗೇಟ್ ನಿರ್ಮಿಸಬೇಡ ಮೊದಲು ನನ್ನ ತೋಟಕ್ಕೆ ಬೇಲಿ ಮಾಡು ಎಂದು ಜಗಳ ತೆಗೆದಾಗ, ಚಾಸಾ.1 ರವರು ಆರೋಪಿಗೆ ಈ ಜಾಗ ನನ್ನದು ನಾನು ಇಲ್ಲಿ ಗೇಟ್ ನಿರ್ಮಿಸುತ್ತೆನೆಂದು ಹೇಳುತ್ತಿರುವಾಗ ನೀವು ಏಕಾಏಕಿ ಚಾಸಾ.1 ರವರಿಗೆ ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ ಕಲಂ 352** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು ಗುದ್ದಲಿಯಿಂದ ಚಾಸಾ.1 ರವರ ತಲೆಗೆ, ಭುಜಕ್ಕೆ, ಕುತ್ತಿಗೆಯ ಹಿಂಭಾಗಕ್ಕೆ ಹಾಗೂ ಎರಡುಕಾಲುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ ಕಲಂ 118(1)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ. ಇದರಿಂದಾಗಿ ಈ ನಿಮ್ಮ ಕೃತ್ಯವು **ಭಾರತೀಯ ನ್ಯಾಯ ಸಂಹಿತ ಕಲಂ 351(2)ರ** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು.

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 21.11.2025

ಸಹಿ/- 21.11.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
*ಪ್ರದನ್ಯಾದಂಃ ಕೊಪ್ಪ.*